## ಜೀವ ವಿಮಾ ನಿಗಮದ ನಿವೃತ್ತ ನೌಕರರು/ ಬ್ಯಾಂಕಿನ ಮಾಜಿ ಸದಸ್ಯರ ಅವಗಾಹನೆಗಾಗಿ

ಜೀವ ವಿಮಾ ನಿಗಮದ ನಿವೃತ್ತ ನೌಕರರೇ ಹಾಗೂ ಬ್ಯಾಂಕಿನ ಆತ್ಮೀಯ ಗ್ರಾಹಕರೇ,

ಜೀವ ವಿಮಾ ನೌಕರರ ಸಹಕಾರ ಬ್ಯಾಂಕ್ ಉಡುಪಿ/ ಧಾರವಾಡ ಇದರೊಂದಿಗೆ ತಮ್ಮೆಲ್ಲರ ಅವಿನಾಭಾವ ಸಂಬಂಧವನ್ನು ಎಂದಿಗೂ ಮರೆಯುವಂತಿಲ್ಲ. ಸೇವಾವಧಿಯಲ್ಲಿ ಬ್ಯಾಂಕಿಗೆ ತಾವು ಸಲ್ಲಿಸಿದ ಸೇವೆ, ದುಡಿಮೆ ಹಾಗೂ ಜೀವ ವಿಮಾ ನಿಗಮದ ಸೇವಾ ನಿವೃತ್ತಿಯ ನಂತರವೂ ತಾವು ಬ್ಯಾಂಕಿನ ಹಿತ ಚಿಂತಕರಾಗಿ ಮುಂದುವರಿದು, ಗ್ರಾಹಕರಾಗಿ, ಮಾರ್ಗದರ್ಶಕರಾಗಿ ಬ್ಯಾಂಕಿನ ಪ್ರಗತಿಯಲ್ಲಿ ಕೈ ಜೋಡಿಸಿರುವುದು ಶ್ಲಾಘನೀಯ.

ಮುಂದುವರಿದಂತೆ, ನಮ್ಮ ಈ ಸಂಬಂಧಕ್ಕೆ ಹೊಸ ಭಾಷ್ಯ ಬರೆಯಲು, ನಿಮ್ಮೆಲ್ಲರನ್ನು ಬ್ಯಾಂಕಿನ ಸಹ ಸದಸ್ಯರನ್ನಾಗಿ ಸೇರಿಸಲು ದಿನಾಂಕ: ೩೦.೦೧.೨೦೧೮ರಂದು ಸಹಕಾರ ಇಲಾಖೆ ಬೆಂಗಳೂರು, ಇವರಿಂದ ಅನುಮತಿ ಪಡೆದು ಬ್ಯಾಂಕಿನ ಉಪವಿಧಿಗಳಿಗೆ ಪೂರಕ ತಿದ್ದುಪಡಿ ಮಾಡಲಾಗಿರುತ್ತದೆ ಮತ್ತು ಸದಸ್ಯರ ಮನವಿಯನ್ನು ಲಕ್ಷಿಸಿ ರೂ.೧ ಲಕ್ಷದವರೆಗಿನ ಸಾಲ ಸೌಲಭ್ಯವನ್ನು ನೀಡಲು ಆಡಳಿತ ಮಂಡಳಿಯು ಅನುಮೋದಿಸಿರುತ್ತದೆ.

ಸಹ ಸದಸ್ಯತ್ವದ ಪ್ರಮುಖ ಅಂಶಗಳು:

ಅರ್ಹತೆ:

ಭಾರತೀಯ ಜೀವ ವಿಮಾ ನಿಗಮ ಸಂಸ್ಥೆಯಿಂದ ಕ್ರಮಬದ್ಧವಾಗಿ ನಿವೃತ್ತಿ ಹೊಂದಿ, ಬ್ಯಾಂಕಿನ ಕಾರ್ಯ ಕ್ಷೇತ್ರದಲ್ಲಿ ಖಾಯಂ ವಾಸವಿರುವ ಎಲ್ಲಾ ವರ್ಗದ ನಿವೃತ್ತ ಜೀವ ವಿಮಾ ನೌಕರರು.

ಸದಸ್ಯತ್ವಕ್ಕಾಗಿ ಅರ್ಜಿ: ೧. ಸಹ ಸದಸ್ಯರಾಗ ಬಯಸುವವರು ಕನಿಷ್ಠ ಷೇರಿನ ಪೂರ್ಣ ಮೊತ್ತ ರೂ.೧೦೦ರ ಜೊತೆಗೆ ಪ್ರವೇಶ ಧನ ರೂ.೨೫ ಪಾವತಿಸಿ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸುವುದು. ೨. ಸಹ ಸದಸ್ಯತ್ವದ ಅರ್ಜಿ ತಿರಸ್ಕೃತವಾದರೆ ಅರ್ಜಿದಾರರಿಗೆ ಸೂಚನೆ ಕೊಟ್ಟು ಅವರು ಪಾವತಿ ಮಾಡಿದ ಷೇರಿನ ಮೊತ್ತವನ್ನು ಮಾತ್ರ ವಾಪಾಸು ನೀಡಲಾಗುವುದು. ೩. ಅರ್ಜಿದಾರ ಸದಸ್ಯನ ಇತ್ತೀಚಿನ ೨ ಭಾವಚಿತ್ರ ಮತ್ತು ಸ್ವಯಂ ದೃಢೀಕೃತ ಐಡಿ ಮತ್ತು ಆಧಾರ ಕಾರ್ಡಿನ ನಕಲು ಹಾಗೂ ಲಿಕೋ ಬ್ಯಾಂಕ್ ಉಡುಪಿ/ ಧಾರವಾಡ ಶಾಖೆಯಲ್ಲಿ ಹೊಂದಿರುವ ಉಳಿತಾಯ ಖಾತೆಯ (ಖ ೦/ಛಿ) ಪುಸ್ತಕದ ಪ್ರಥಮ ಪುಟದ ಸ್ವಯಂ ದೃಢೀಕೃತ ನಕಲನ್ನು ಲಗತ್ತಿಸತಕ್ಕದ್ದು.

ಹೊಣೆಗಾರಿಕೆ:

೧. ಪ್ರತೀ ಸಹ ಸದಸ್ಯನ ಹೊಣೆಗಾರಿಕೆಯು ಸಾಮಾನ್ಯ ಸದಸ್ಯರಿಗೆ ಅನ್ವಯವಾಗುವ ಉಪನಿಬಂಧನೆ ಸಂಖ್ಯೆ ೨೫(೧)(೩)(೪) ಮತ್ತು (೫)ರಲ್ಲಿದಂತೆ ಇರತಕ್ಕದ್ದು.

೨೫.೧ ಬ್ಯಾಂಕು ಸಮಾಪನೆಗೊಂಡ ಸಂದರ್ಭದಲ್ಲಿ ಪ್ರತಿಯೊಬ್ಬ ಸದಸ್ಯನ ಹೊಣೆಗಾರಿಕೆಯು ಆತನು ಹೊಂದಿರುವ ಷೇರಿನ ಮೊತ್ತಕ್ಕೆ ಸೀಮಿತವಾಗಿರುತ್ತದೆ.

೨೫.೨ ಸಹ ಸದಸ್ಯರು ಮತ್ತು ನಾಮಮಾತ್ರ ಸದಸ್ಯರನ್ನು ಹೊರತುಪಡಿಸಿ ಬ್ಯಾಂಕಿನ ಎಲ್ಲಾ ಸದಸ್ಯರೂ ವಾರ್ಷಿಕ ಮಹಾಸಭೆ/ ವಿಶೇಷ ಮಹಾಸಭೆಗಳಲ್ಲಿ ಭಾಗವಹಿಸತಕ್ಕದ್ದು ಹಾಗೂ ನಿರ್ದೇಶಕ ಮಂಡಳಿಗೆ ನಡೆಯುವ ಚುನಾವಣೆಯಲ್ಲಿ ಭಾಗವಹಿಸತಕ್ಕದ್ದು.

೨೫.೩ ಬ್ಯಾಂಕಿನಿಂದ ಸಾಲ ಪಡೆದ ಸಾಲಗಾರ ಸದಸ್ಯರು ಯಾವ ಉದ್ದೇಶಕ್ಕಾಗಿ ಸಾಲ ಪಡೆದಿರುತ್ತಾರೋ ಅದೇ ಉದ್ದೇಶಕ್ಕಾಗಿ ವಿನಿಯೋಗಿಸತಕ್ಕದ್ದು. ಸಾಲಗಾರ / ಜಾಮೀನುದಾರರು ಬ್ಯಾಂಕು ನಿಗದಿಪಡಿಸಿದಂತೆ ಕಾಲ ಕಾಲಕ್ಕೆ ಸಾಲದ ಅಸಲು, ಬಡ್ಡಿ ಮತ್ತು ದಂಡ ಬಡ್ಡಿ ಇತ್ಯಾದಿ ವೆಚ್ಚಗಳನ್ನು ಪಾವತಿಸತಕ್ಕದ್ದು.

೨೫.೪ ಪ್ರತಿ ಸದಸ್ಯರು ಆಡಳಿತ ಮಂಡಳಿ ಕಾಲಕಾಲಕ್ಕೆ ನಿಗದಿಪಡಿಸುವ ಠೇವಣಿ ಮೊತ್ತವನ್ನು ಭರಿಸತಕ್ಕದ್ದು.

೨೫.೫ ಯಾವ ಸದಸ್ಯನೇ ಆಗಲಿ ಬ್ಯಾಂಕಿನ ಹಿತಕ್ಕೆ ಧಕ್ಕೆ ಬರುವಂತಹ ಯಾವುದೇ ಚಟುವಟಿಕೆಗಳಲ್ಲಿ ತೊಡಗಬಾರದು.

೨. ಬ್ಯಾಂಕಿನ ಸಹ ಸದಸ್ಯನ ಹೊಣೆಗಾರಿಕೆಯು ಸಾಲಗಾರರಾಗಿ ಅಥವಾ ಜಾಮೀನುದಾರರಾಗಿ ಅವರು ಹೊಂದಿರುವ ಷೇರಿನ ಮೊತ್ತ ಹಾಗೂ ಬ್ಯಾಂಕಿಗೆ ಕೊಡಬೇಕಾದ ಸಾಲದ ಬಾಕಿಗೆ ಮಾತ್ರ ಸೀಮಿತವಾಗಿರುತ್ತದೆ. ಸಹ ಸದಸ್ಯರಿಗೆ ಈ ಕೆಳಗಿನ ಅಂಶಗಳಿಗೆ ಹಕ್ಕುಗಳಿರುವುದಿಲ್ಲ. (ಅ) ವಾರ್ಷಿಕ ಮಹಾಸಭೆಗಳಲ್ಲಿ ಭಾಗವಹಿಸಲು, ಮತಹಾಕಲು ಅಥವಾ ಆ ಬಗ್ಗೆ ಸೂಚನಾಪತ್ರ ಪಡೆಯಲು (ಆ) ಬ್ಯಾಂಕಿನ ಸಾಮಾನ್ಯ ಸದಸ್ಯರು ಪಡೆಯುವಂತೆ ಬ್ಯಾಂಕಿನ ವಾರ್ಷಿಕ ವರದಿ, ಆಸ್ತಿ–ಜವಾಬ್ದಾರಿ ಪಟ್ಟಿ ಅಥವಾ ಇತರೆ ಪತ್ರಗಳನ್ನು ಪಡೆಯಲು (ಇ) ಬ್ಯಾಂಕಿನ ಆಡಳಿತದಲ್ಲಿ ಭಾಗವಹಿಸಲು (ಈ) ಸಹಸದಸ್ಯನು ಇತರೆ ಸಹಕಾರಿ ಬ್ಯಾಂಕ್ ಅಥವಾ ಕೃಷಿಯೇತರ ಪತ್ತಿನ ಸಹಕಾರ ಸಂಘಗಳಲ್ಲಿ ಸದಸ್ಯನಾಗಿ ಅಥವಾ ಸಹಸದಸ್ಯನಾಗಿ ಇರಕೂಡದು

ಸಾಲದ ಉಪನಿಯಮಗಳು:

೧. ಸಾಲಕ್ಕಾಗಿ ಅರ್ಜಿ ಸಲ್ಲಿಸುವ ಸಹ ಸದಸ್ಯರು/ ಜಾಮೀನುದಾರರು ಕಡ್ಡಾಯವಾಗಿ ಬ್ಯಾಂಕಿನಲ್ಲಿ ಉಳಿತಾಯ ಖಾತೆ ಹೊಂದಿದ್ದು ಆತನ/ಳ ಮಾಸಿಕ ನಿವೃತ್ತಿ ವೇತನವನ್ನು ಅಂಥಃ ಖಾತೆಗಳಿಗೆ ತಪ್ಪದೇ ಜಮಾ ವಿರಿಸತಕ್ಕದ್ದು.
೨. ಸಾಲಕ್ಕಾಗಿ ಅರ್ಜಿ ಸಲ್ಲಿಸುವ ಸಹ ಸದಸ್ಯನ/ ಜಾಮೀನುದಾರ/ಸಹ ಸದಸ್ಯನ ವಯಸ್ಸು ಗರಿಷ್ಠ ಸಾಲ ವಸೂಲಾತಿಯ ೬೦ ಮಾಸಿಕ ಕಂತುಗಳನ್ನು ಲೆಕ್ಕಿಸಿ ೭೫ಕ್ಕೆ ಮೀರತಕ್ಕದಲ್ಲ. ೩. ಗರಿಷ್ಠ ಸಾಲದ ಮೊತ್ತ ರೂ. ೧ ಲಕ್ಷ ಮತ್ತು ಮರು ಪಾವತಿ ಅವಧಿ ೬೦ ಮಾಸಿಕ ಕಂತುಗಳು. ೪. ಸಾಲ ಅಪೇಕ್ಷಿತ ಸದಸ್ಯನ ಅಥವಾ ಅಂತಹ ಸಾಲದ ಜಾಮೀನುದಾರ ಸಹಸದಸ್ಯನ ಹೆಸರಿನಲ್ಲಿ ಕನಿಷ್ಠ ಸಾಲದ ಮೊತ್ತಕ್ಕೆ ಸಮನಾಗಿ ಬ್ಯಾಂಕಿನಲ್ಲಿ ಠೇವಣಿ ಇದ್ದು ಆ ಠೇವಣಿ ಪತ್ರವನ್ನು ಸಾಲ ಖಾತರಿಗಾಗಿ ಬ್ಯಾಂಕಿಗೆ ನೀಡತಕ್ಕದ್ದು. ಪರಂತು ಜಾಮೀನುದಾರನು ಬ್ಯಾಂಕಿನ ಓರ್ವ ಸದಸ್ಯನಾಗಿದ್ದಲ್ಲಿ ಅಂತಹ ಠೇವಣಿಯು ಕಡ್ಡಾಯವಿರುವುದಿಲ್ಲ. ೫. ಸಾಲದ ಕಂತುಗಳನ್ನು ಪ್ರತೀ ತಿಂಗಳ ೧ನೇ ತಾರೀಕಿನಂದು ಸಂಬಂಧಪಟ್ಟ ಸಾಲಗಾರ/ ತಪ್ಪಿದಲ್ಲಿ ಜಾಮೀನುದಾರನ ಉಳಿತಾಯ ಖಾತೆಯಿಂದ ವಜಾ ಮಾಡಲಾಗುವುದು ಯಾ ಸದಸ್ಯರಾಗಿದಲ್ಲಿ ಅತನ/ಳ ವೇತನದಿಂದ ನೇರವಾಗಿ ವಸೂಲಾತಿಗೆ ಕ್ರಮವಿ–ರಿಸಲಾಗುವುದು ೬. ಸತತ ೩ ಕಂತುಗಳು ವಸೂಲಾತಿ ಆಗದಿದ್ದಲ್ಲಿ, ಖಾತರಿ ಇಟ್ಟ ಠೇವಣಿಯನ್ನು ಪಕ್ವಗೊಳಿಸಿ ಸಾಲವನ್ನು ಪೂರ್ಣವಾಗಿ ಖೈದುಗೊಳಿಸಲು ಬ್ಯಾಂಕಿಗೆ ಅಧಿಕಾರ ಇರುವುದು. ೭. ಈ ಸಾಲಕ್ಕೆ ೯.೫% ಬಡ್ಡಿದರ ವಿಧಿಸಲಾಗುವುದು. ೮. ಸಾಲಗಾರ/ ಜಾಮೀನುದಾರ ಸಹ ಸದಸ್ಯನ ಮಾಸಿಕ ನಿವೃತ್ತಿ ವೇತನವು ಸಾಲದ ಮಾಸಿಕ ಕಂತುಗಳ ೪ ಪಟ್ಟುಇರತಕ್ಕದ್ದು. ೯. ಈ ಸಾಲಕ್ಕೆ ಜಾಮೀನುದಾರನಾಗಿ ಓರ್ವ ಸಹ ಸದಸ್ಯ ಅಥವಾ ಜೀವ ವಿಮಾ ನಿಗಮದಲ್ಲಿ ಕನಿಷ್ಟ ೪ ವರ್ಷ ಸೇವೆ ಸಲ್ಲಿಸಿದ ಬ್ಯಾಂಕಿನ ಓರ್ವ ಸದಸ್ಯ ಅರ್ಹನಿರುತ್ತಾನೆ. ೧೦. ಷೇರುಗಳ ಜೋಡಣೆ: ಸಾಲದ ಮೊಬಲಗಿನ ಶೇಕಡ ೫ ರಷ್ಟು ಷೇರುಗಳನ್ನು ಪಡೆದಿರಬೇಕು.